# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 434 |
| ಸದಸ್ಯರ ಹೆಸರು | : | ಶ್ರೀ ಎನ್.ಎಸ್. ಬೋಸರಾಜು |
| ಉತ್ತರಿಸುವ ದಿನಾಂಕ | : | 19/07/2019 |
| ಉತ್ತರಿಸುವ ಸಚಿವರು | : | ಮಾನ್ಯ ಗೃಹ ಸಚಿವರು |

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>ಅ) ರಾಯಚೂರು ನಗರದ ಹೃದಯ ಭಾಗದಲ್ಲಿರುವ ಕೇಂದ್ರ ಕಾರಾಗೃಹವನ್ನು ನಗರದ ಹೊರಭಾಗಕ್ಕೆ ಸ್ಥಳಾಂತರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;</td><td>ನೂತನ ಜಿಲ್ಲಾ ಕಾರಾಗೃಹ ನಿರ್ಮಾಣಕ್ಕೆ ಸಂಬಂಧಿಸಿದಂತೆ, ವಡವಟ್ಟಿ ಗ್ರಾಮದ ಸರ್ವೆ ನಂ. 99ರಲ್ಲಿ 30 ಎಕರೆ ಜಮೀನು, ಪೊಲೀಸ್ ಫೈರಿಂಗ್ ರೇಂಜ್ ಪಕ್ಕದ 18 ಎಕರೆ ಜಮೀನು ಹಾಗೂ ಎರಗೇರ ವಿಶ್ವವಿದ್ಯಾಲಯದ ಕ್ಯಾಂಪ್ ಎದುರುಗಡೆ ಇರುವ ಜಮೀನುಗಳನ್ನು ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರು ಗುರುತಿಸಿದ್ದು, ಈ ಜಮೀನುಗಳಲ್ಲಿ ಯಾವುದಾದರೊಂದು ಜಮೀನನ್ನು ಕಾರಾಗೃಹ ಇಲಾಖೆಗೆ ಮಂಜೂರು ಮಾಡುವಂತೆ ಜಿಲ್ಲಾಡಳಿತವನ್ನು ಕೋರಲಾಗಿದೆ.</td></tr>
<tr><td>ಆ) ನೂತನ ತಾಲ್ಲೂಕು ಸಿರವಾರದಲ್ಲಿ ಅಗ್ನಿಶಾಮಕ ಠಾಣೆ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;</td><td>ರಾಯಚೂರು ಜಿಲ್ಲೆಯ ನೂತನ ತಾಲ್ಲೂಕು ಸಿರವಾರ ಪಟ್ಟಣದಲ್ಲಿ ಅಗ್ನಿಶಾಮಕ ಠಾಣೆ ಸ್ಥಾಪಿಸಲು ಜಿಲ್ಲಾಧಿಕಾರಿ, ರಾಯಚೂರು ಇವರು ಮಾನ್ವಿ ತಾಲ್ಲೂಕಿನ ಸಿರವಾರ ಗ್ರಾಮದ ಸರ್ವೆ ನಂ. 95ರಲ್ಲಿ 2.00ಎಕರೆ ಜಮೀನನ್ನು ಕಾಯ್ದಿರಿಸಿ ಆದೇಶ ಹೊರಡಿಸಿರುತ್ತಾರೆ.<br><br>ಆದರೆ, ಈ ಜಮೀನು ಸಿರವಾರ ಪಟ್ಟಣದಿಂದ 03 ಕಿ.ಮೀ. ಹಾಗೂ ಈಗಾಗಲೇ ಪ್ರಾರಂಭವಾಗಿರುವ ಅರಕೇರ ಅಗ್ನಿಶಾಮಕ ಠಾಣೆಗೆ 10 ಕಿ.ಮೀ. ಅಂತರದಲ್ಲಿದೆ. ಆದ್ದರಿಂದ ಸಿರವಾರ ಪಟ್ಟಣದಲ್ಲಿಯೇ 2.00 ಎಕರೆ ಜಮೀನು ಮಂಜೂರು ಮಾಡುವಂತೆ ಜಿಲ್ಲಾಧಿಕಾರಿ, ರಾಯಚೂರು ಇವರಿಗೆ ಪತ್ರ ಬರೆಯಲಾಗಿದೆ.</td></tr>
<tr><td>ಇ) ನೂತನ ತಾಲ್ಲೂಕು ಸಿರವಾರದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್‌ರವರ ವೃತ್ತ ಕಛೇರಿ (CPI Circle) ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;</td><td>ಸರ್ಕಾರದ ಹಂತದಲ್ಲಿ ಯಾವುದೇ ಪ್ರಸ್ತಾವನೆಯು ಇರುವುದಿಲ್ಲ.</td></tr>
<tr><td>ಈ) ರಾಯಚೂರು ಜಿಲ್ಲೆಯಲ್ಲಿ ಪೊಲೀಸ್ ಸಿಬ್ಬಂದಿಗಳ ಕೊರತೆ ನೀಗಿಸಲು ಈ ಸರ್ಕಾರ ತೆಗೆದುಕೊಂಡ ಕ್ರಮಗಳೇನು?</td><td>ರಾಯಚೂರು ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳ ವಿವರ :<br><br>ಸಿವಿಲ್
<table>
<tr><th>ಕ್ರ.ಸಂ</th><th>ಹುದ್ದೆ</th><th>ರಿಕ್ತಸ್ಥಾನ</th></tr>
<tr><td>1</td><td>ಪಿಎಸ್ಐ</td><td>13</td></tr>
<tr><td>2</td><td>ಎಎಸ್ಐ</td><td>2</td></tr>
<tr><td>3</td><td>ಸಿಹೆಚ್‌ಸಿ</td><td>8</td></tr>
<tr><td>4</td><td>ಸಿಪಿಸಿ</td><td>77</td></tr>
</table>
ಡಿಎಆರ್
<table>
<tr><th>ಕ್ರ ಸಂ</th><th>ಹುದ್ದೆ</th><th>ರಿಕ್ತಸ್ಥಾನ</th></tr>
<tr><td>1</td><td>ಆರ್‌ಎಸ್ಐ</td><td>2</td></tr>
<tr><td>2</td><td>ಎಆರ್‌ಎಸ್ಐ</td><td>13</td></tr>
<tr><td>3</td><td>ಎಹೆಚ್‌ಸಿ</td><td>2</td></tr>
<tr><td>4</td><td>ಎಪಿಸಿ</td><td>9</td></tr>
</table></td></tr>
</table>

ರಾಯಚೂರು ಜಿಲ್ಲೆಯಲ್ಲಿ ಪೊಲೀಸ್ ಸಿಬ್ಬಂದಿಗಳ ಕೊರತೆ [illegible] ತೆಗೆದುಕೊಂಡ ಕ್ರಮಗಳ ವಿವರ :

11 ಪಿಎಸ್ಐ (ಸಿವಿಲ್) ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು, ಸಂಖ್ಯೆ: 70/ನೇಮಕಾತಿ-2/2017-18, ದಿನಾಂಕ: 07.06.2018ರಲ್ಲಿ ನೇಮಕಾತಿ ಅಧಿಸೂಚನೆ ಹೊರಡಿಸಲಾಗಿದೆ. ಹಾಲಿ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ್ದು, ಅಭ್ಯರ್ಥಿಗಳ ವೈದ್ಯಕೀಯ ಪರೀಕ್ಷೆ ಮತ್ತು ದಾಖಲಾತಿ ಪರಿಶೀಲನೆ ಕಾರ್ಯ ಪ್ರಗತಿಯಲ್ಲಿರುತ್ತದೆ. ಸದರಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಆದ್ಯತೆ ಮೇರೆಗೆ ರಾಯಚೂರು ಜಿಲ್ಲೆಗೆ ಪಿಎಸ್ಐ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಹಾಲಿ 05 ಜನ ಪ್ರೊಬೇಷನರಿ ಪಿಎಸ್ಐ ರವರುಗಳನ್ನು ರಾಯಚೂರು ಜಿಲ್ಲೆಗೆ ಪ್ರಾಯೋಗಿಕ ತರಬೇತಿಗೆ ನೇಮಿಸಲಾಗಿರುತ್ತದೆ.

05 ಆರ್‌ಎಸ್‌ಐ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸಂಖ್ಯೆ: 70/ನೇಮಕಾತಿ-2/2017-18, ದಿನಾಂಕ: 07.06.2018ರಲ್ಲಿ ನೇಮಕಾತಿ ಅಧಿಸೂಚನೆ ಹೊರಡಿಸಲಾಗಿದೆ. ಹಾಲಿ ಆಯ್ಕೆಪಟ್ಟಿಯನ್ನು ಪ್ರಕಟಿಸಿದ್ದು, ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ ಪ್ರಗತಿ ಹಂತದಲ್ಲಿರುತ್ತದೆ. ಸದರಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಆದ್ಯತೆ ಮೇರೆಗೆ ರಾಯಚೂರು ಜಿಲ್ಲೆಗೆ ಆರ್‌ಎಸ್‌ಐ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಹಾಗೂ ಖಾಲಿ ಇರುವ ಮುಂಬಡ್ತಿ ಹುದ್ದೆಗಳನ್ನು ಅರ್ಹ ಅಭ್ಯರ್ಥಿಗಳು ಲಭ್ಯವಿದ್ದಾಗ ಮುಂಬಡ್ತಿ ನೀಡುವ ಮೂಲಕ ಭರ್ತಿ ಮಾಡಲಾಗುವುದು.

ರಾಯಚೂರು ಜಿಲ್ಲೆಯಲ್ಲಿ ಖಾಲಿ ಇರುವ ಮುಂಬಡ್ತಿ ಹುದ್ದೆಗಳನ್ನು ದಿನಾಂಕ: 08.07.2019ರಂದು ಮುಂಬಡ್ತಿ ನೀಡಿ ಭರ್ತಿ ಮಾಡಲಾಗಿರುತ್ತದೆ. ವಿವರ ಈ ಕೆಳಕಂಡಂತಿರುತ್ತದೆ.

| ಕ್ರ ಸಂ | ಹುದ್ದೆ | ಮುಂಬಡ್ತಿ ನೀಡಿರುವ ಹುದ್ದೆಗಳ ಸಂಖ್ಯೆ |
|---|---|---|
| 1 | ಎಎಸ್‌ಐ | 33 |
| 2 | ಸಿಹೆಚ್‌ಸಿ | 50 |
| 3 | ಎಹೆಚ್‌ಸಿ | 19 |

| ಕ್ರ ಸ | ಅಧಿಸೂಚನೆ ಸಂಖ್ಯೆ | ಹುದ್ದೆಯ ವಿವರ | ಷರಾ |
|---|---|---|---|
| 1 | ಅಧಿಸೂಚನೆ ಸಂ: 11/ನೇ-4/17-18, ದಿ: 29.05.2017 | ಸ್ಥಳೀಯ ಸಿಪಿಸಿ (ಸಿವಿಲ್)-141<br>ಸ್ಥಳೀಯ ಮಪಿಸಿ (ಸಿವಿಲ್)-38<br>ಸ್ಥಳೀಯೇತರ ಸಿಪಿಸಿ(ಸಿವಿಲ್)-35<br>ಸ್ಥಳೀಯೇತರ ಸಿಪಿಸಿ(ಸಿವಿಲ್)-10 | ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಿದ್ದು, 199 ಜನ ಸಿಪಿಸಿ/ಮಪಿಸಿ ರವರುಗಳು ವಿವಿಧ ತರಬೇತಿ ಶಾಲೆಗಳಲ್ಲಿ ಬುನಾದಿ ತರಬೇತಿಯಲ್ಲಿ ಇರುತ್ತಾರೆ. ಸದರಿ ನೇಮಕಾತಿ ಪ್ರಕ್ರಿಯೆಯ ಸಮಯದಲ್ಲಿ 04 ಜನ ಅಭ್ಯರ್ಥಿಗಳು ಗೈರುಹಾಜರಾಗಿರುತ್ತಾರೆ. 06 ಜನ ಅಭ್ಯರ್ಥಿಗಳು |

| | | | |
|---|---|---|---|
| | | | ಅನ್ಯ ಕಾರಣಗಳಿಂದಾಗಿ ಸದರಿ ಹುದ್ದೆಗೆ ರಾಜೀನಾಮೆಯನ್ನು ಸಲ್ಲಿಸಿರುತ್ತಾರೆ. 05 ಜನ ಅಭ್ಯರ್ಥಿಗಳಿಗೆ ಈಗಾಗಲೇ ನೇಮಕಾತಿ ಆದೇಶವನ್ನು ನೀಡಿದ್ದು, ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು ಬಾಕಿ ಇರುತ್ತದೆ. ಇನ್ನು 10 ಜನ ಅಭ್ಯರ್ಥಿರವರುಗಳ ದಾಖಲಾತಿಗಳು ಪರಿಶೀಲನೆಯಲ್ಲಿದ್ದು, ನೇಮಕಾತಿ ಆದೇಶವನ್ನು ನೀಡುವುದು ಬಾಕಿ ಇರುತ್ತದೆ. |
| 2 | ಅಧಿಸೂಚನೆ ಸಂ: 20/ನೇ-4/17-18, ದಿ: 24.08.2017 | ಎಪಿಸಿ (ಸ್ಥಳೀಯ)-47<br>ಎಪಿಸಿ (ಸ್ಥಳೀಯೇತರ)-29 | ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಿದ್ದು, 67 ಜನ ಎಪಿಸಿ ರವರುಗಳು ವಿವಿಧ ತರಬೇತಿ ಶಾಲೆಗಳಲ್ಲಿ ಬುನಾದಿಯಲ್ಲಿ ಇರುತ್ತಾರೆ. 01 ಅಭ್ಯರ್ಥಿಯು ಅನ್ಯ ಕಾರಣಗಳಿಂದಾಗಿ ಸದರಿ ಹುದ್ದೆಗೆ ರಾಜೀನಾಮೆಯನ್ನು ಸಲ್ಲಿಸಿರುತ್ತಾರೆ. 03 ಜನ ಅಭ್ಯರ್ಥಿಗಳಿಗೆ ಈಗಾಗಲೇ ನೇಮಕಾತಿ ಆದೇಶವನ್ನು ನೀಡಿದ್ದು, ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು ಬಾಕಿ ಇರುತ್ತದೆ. ಉಳಿದಂತೆ 05 ಜನ ಅಭ್ಯರ್ಥಿರವರುಗಳ ದಾಖಲಾತಿಗಳು ಪರಿಶೀಲನೆಯಲ್ಲಿದ್ದು, ನೇಮಕಾತಿ ಆದೇಶವನ್ನು ನೀಡುವುದು ಬಾಕಿ ಇರುತ್ತದೆ. |

ನೇರ ನೇಮಕಾತಿ ಮತ್ತು ಮುಂಬಡ್ತಿ ಪ್ರಕ್ರಿಯೆಯು ನಿರಂತರವಾಗಿದ್ದು, ಇದಕ್ಕೆ ಯಾವುದೇ ಕಾಲಮಿತಿ ಇರುವುದಿಲ್ಲ.

ಸಂಖ್ಯೆ: ಹೆಚ್‌ಡಿ 44 ಪಿಆರ್‌ಎ 2019

(ಎಂ.ಬಿ. ಪಾಟೀಲ್)
ಗೃಹ ಸಚಿವರು